# ಬದುಕಿನ ಮುಸ್ಸಂಜೆ ರಂಗೇರಿತು
# ಕಡಿದುಹೋದ ಕರುಳು ಮರಳಿತು

ಶೀಲಾಳ ಒತ್ತಾಯದಿಂದಾಗಿ ಮರೆವೆಗೆ ಸಂದಿದ್ದ ಅಕ್ಕ ಭಾಮಳಿಗೆ ಕರೆ ಮಾಡಿದ ಭಾರ್ಗವ, ಅಪ್ಪನ ಅನಾರೋಗ್ಯದ ವಿಷಯ ತಿಳಿಸಿದ.

ಒಂದು ವಾರ ಕಳೆಯಿತು. ಆ ಕಡೆಯಿಂದ ಯಾವ ಸುದ್ದಿ ಇಲ್ಲ. ಅಪ್ಪನ ಕಾಯಿಲೆಯ ಬಗ್ಗೆ ಅಕ್ಕನಿಗೆ ಸಂಪೂರ್ಣ ಮಾಹಿತಿ ನೀಡಿದ್ದ ಭಾರ್ಗವ. ಲೊಚಗುಟ್ಟುತ್ತಾ ಎಲ್ಲಾ ಕೇಳಿಸಿಕೊಂಡಿದ್ದಳು ಭಾಮ. ಅಳುತ್ತಿದ್ದಾಳೆ ಎಂಬುದು ಅವಳ ಭಾರವಾದ ದನಿಯಿಂದ ಅರ್ಥವಾಗಿ ಒಂದು ಥರಾ ಸಮಾಧಾನ. 'ಎಲ್ಲಿಗೂ ಒಬ್ರನ್ನೇ ಬಿಟ್ಟು ಹೋಗೋ ಹಾಗಿಲ್ಲ. ಜೊತೆಗೆ ಕರ್ಕೊಂಡು ಹೋಗೋ ಹಾಗೂ ಇಲ್ಲ. ತಲೆ ಕೆಟ್ಹೋಗಿದೆ ಕಣೇ. ನನಗಿಂತ ಹೆಚ್ಚು ನನ್ನ ಹೆಂಡತಿಗೆ. ಇಬ್ರಿಬ್ರು ಮಕ್ಳಿದೀವಿ. ಅವರ ನಿಗಾ ನೋಡ್ಕೊಳ್ಳೋ ಹೊಣೆ ಇಬ್ರೂ ವಹಿಸ್ಕೊಂಡ್ರೆ ಎಷ್ಟೋ ಹಗುರ ಆಗುತ್ತೆ ಅಲ್ವಾ? ಒತ್ತಾಯ ಇಲ್ಲ. ನೋಡು, ಯೋಚನೆ ಮಾಡು. ಜಾಗ ಬದಲಾದ್ರೆ ಅಪ್ಪ ಬದಲಾದ್ರೂ ಆಗ್ಬೋದು. ನಿನ್ನ ನೋಡಿದ್ರೆ ಸಮಾಧಾನಾನೂ ಆಗ್ಬೋದು. ಗಟ್ಟಿ ಕೇಳಿದ್ರೆ ನೀನು ಮನೆ ಬಿಟ್ಟು ಹೋದಾಗಿಂದ ಅಪ್ಪ ಡಲ್ ಆಗ್ತಾ ಬಂದ್ರು...' ಸತ್ಯದ ಜೊತೆ ಸುಳ್ಳು ಬೆರೆಸಿ ಹೇಳಿದ ವೈಖರಿಗೆ ಶೀಲಾಳೇ ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದಳು.

'ಪರ್ವಾಗಿಲ್ರೀ ನೀವು. ಗೊತ್ತೇ ಆಗದ ಹಾಗೆ ನಿಮ್ಮಕ್ಕನ ಮೇಲೆ ಒಂದು ಗೂಬೆ ಕೂರಿಸ್ಬಿಟ್ರಿ...' ಅಂದಿದ್ದಳು.

'ನೋವಾಗ್ಬೇಕಾದ್ರೆ ಸ್ವಲ್ಪ ಚುಚ್ಬೇಕು ಕಣೇ...' ಎಂದು ಹೇಳಿದ್ದ ಭಾರ್ಗವ. ಅಕ್ಕ ಬಂದೇ ಬರುತ್ತಾಳೆ ಎಂದು ಅವನಿಗೆ ನಂಬಿಕೆ. ದಿನ ಕಳೆದ ಹಾಗೆ ಆ ನಂಬಿಕೆ ಹುಸಿಯಾಗುತ್ತಾ ಬಂತು.

'ನೋಡಿದ್ರಾ? ಈಗ್ಲಾದ್ರೂ ಹೇಳಿ, ನಾನು ತಪ್ಪು ಮಾಡ್ದೆ ಅನಿಸುತ್ತಾ? ಆ ಕಡೆ ಗಿಲೀಟು ಮಾಡಿ ಅಪ್ಪನ ಆಸ್ತೀಲಿ ಅರ್ಧ ಪಾಲು ಹೊಡ್ಕೊಂಡು, ಈ

